ಕಾನೂನು ಮತ್ತು ಶಿಸ್ತು ಪರಿಪಾಲನೆ ಮಾಡಲು ಅಸಾಧ್ಯ. ಸರಕಾರವು ಈ ವಿಚಾರಗಳನ್ನು ಪರಿಶೀಲಿಸಿ ಕಾಪು ಪೋಲೀಸ್ ಠಾಣೆಯನ್ನು ಪೂರ್ಣ ಪ್ರಮಾಣದ ಠಾಣೆಯನ್ನಾಗಿ ಪರಿವರ್ತಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಪರಿಶೀಲನೆ ಮಾಡಿ ಸರ್ಕಾರ ಸೂಕ್ತ ಕ್ರಮವನ್ನು ತೆಗೆದು ಕೊಳ್ಳುತ್ತದೆ.

(೫.) ಬೀಳಗಿ ತಾಲ್ಲೂಕಿನ ಕೊರ್ತಿ ಗ್ರಾಮದ ಹತ್ತಿರವಿರುವ ಸೇತುವೆ ಹಳೆಯದಾಗಿರುವುದು

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಬಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ ಕೊರ್ತಿ ಗ್ರಾಮದ ಹತ್ತಿರ ಕೃಷ್ಣಾ ನದಿ ಹರಿಯುತ್ತಿದ್ದು ಈ ನದಿಗೆ ಅಡ್ಡವಾಗಿ ಬ್ರಿಟಿಷ್ ಕಾಲದಲ್ಲಿ ಒಂದು ಕಾಜ್‌ವೇ (ಸಣ್ಣ ಸೇತುವೆ) ಕಟ್ಟಿಸಲಾಗಿದ್ದು ಈ ಸೇತುವೆ ಸುಮಾರು ೭೫ ವರ್ಷಗಳಷ್ಟು ಹಳೆಯದಾಗಿದೆ.

ಸುಮಾರು ಹತ್ತು ವರ್ಷಗಳ ಹಿಂದೆ ಈ ಕಿರಿಯ ಸೇತುವೆಗೆ ಒಂದು ಬ್ಯಾರೇಜ್ ಕಟ್ಟಲಾಗಿದೆ. ಪ್ರತಿವರ್ಷ ಮಳೆಗಾಲದಲ್ಲಿ ಈ ಸೇತುವೆ ತಿಂಗಳಾನುಗಟ್ಟಲೆ ನೀರಿನಲ್ಲಿ ಮುಳುಗುತ್ತಿದ್ದು ಆ ಕಾರಣ ಕ್ಕಾಗಿ ಅದು ಅತ್ಯಂತ ಶಿಥಿಲಗೊಂಡಿದೆ. ವಿಜಾಪುರ ಮತ್ತು ಬಾಗಲಕೋಟೆ ಅಂದರೆ ವಿಜಾಪುರ ದಕ್ಷಿಣ ಭಾಗವನ್ನು ಈ ಸೇತುವೆ ಜೋಡಿಸುತ್ತದೆ. ಆಲಮಟ್ಟಿ ಅಣೆಕಟ್ಟಿನಲ್ಲಿ ಇದು ಮುಳುಗಿ ಹೋಗುವುದರಿಂದ ಇಲ್ಲಿ ಹೊಸ ಸೇತುವೆ ನಿರ್ಮಾಣ ಸಾಧ್ಯವಿಲ್ಲವೆಂಬ ಉತ್ತರ ನನಗೆ ಕಳೆದ ವಿಧಾನ ಮಂಡಲದ ಅಧಿವೇಶನದಲ್ಲಿ ಸಂಬಂಧಿಸಿದ ಸಚಿವರಿಂದ ಬಂದಿದೆ. ಆಲಮಟ್ಟಿಯ ಅಣೆಕಟ್ಟು ಆಗುವುದು ಇನ್ನೂ ಹತ್ತು ವರ್ಷದ ಮಾತು. ಅಲ್ಲಿಯವರೆಗೆ ರಾಷ್ಟ್ರೀಯ ಹೆದ್ದಾರಿಯ ಮೇಲಿರುವ ಈ ಸೇತುವೆ ಮಾರ್ಗದಿಂದಲೇ ಸಂಚಾರ ನಡೆಯಬೇಕು. ಈ ವರ್ಷ ಅದು ಅತ್ಯಂತ ಶಿಥಿಲವಾಗಿರುವುದರಿಂದ ಮುಂಬರುವ ಗಂಡಾಂತರವನ್ನು ಅನುಲಕ್ಷಿಸಿ ಈ ವರ್ಷ ಅದಕ್ಕೆ ಸಿಮೆಂಟ್ ಕಾಂಕ್ರೀಟ್ ಹಾಕುವ ಮೂಲಕ ಅದನ್ನು ತಾತ್ಕಾಲಿಕವಾಗಿ ರಕ್ಷಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಸನ್ಮಾನ್ಯ ಸದಸ್ಯರಾದ ಬಾಬುರೆಡ್ಡಿ ತುಂಗಳ್ ಅವರು ತಿಳಿಸಿರುವ ಕಿರಿಯ ಸಣ್ಣ ಸೇತುವೆ ಶಿಥಿಲತೆ ಏನಿದೆ ಅದಕ್ಕೆ ತಾಂತ್ರಿಕವಾದ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಅವರೇ ಸೂಚನೆ ಕೊಟ್ಟಿದ್ದಾರೆ. ಅಧಿಕಾರಿಗಳ ವರದಿಯನ್ನು ತರಿಸುತ್ತೇನೆ. ಸಮಾಲೋಚನೆ ಮಾಡಿ ಇದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಆ ಎಲ್ಲಾ ಕ್ರಮಗಳನ್ನು ತೆಗೆದು ಕೊಳ್ಳುವುದಕ್ಕೆ ನಾನು ಆಶ್ವಾಸನೆ ಕೊಡುತ್ತೇನೆ.

೧-೫೦ ಪಿ. ಎಂ.

(೬) ಚಿತ್ರದುರ್ಗ ನಗರದ ಶಾಲಾ ಮಕ್ಕಳಿಗೆ ಉಪಹಾರಕ್ಕೆ ಒದಗಿಸುತ್ತಿದ್ದ ವಸ್ತುಗಳ ದುರುಪಯೋಗ

ಶ್ರೀ ಬಿ. ರಾಮ್‌ದಾಸ್.—ಅಧ್ಯಕ್ಷರೇ, ಚಿತ್ರದುರ್ಗ ನಗರದಲ್ಲಿ ಪ್ರತಿದಿನ ೬,೦೦೦ ಶಾಲಾ ಮಕ್ಕಳಿಗೆ ಮಧ್ಯಾಹ್ನ ಉಪಹಾರಕ್ಕಾಗಿ ಉಪ್ಪಿಟ್ಟು ತಯಾರಿಕೆ ಮಾಡಲು ಸುಮಾರು ೨೫ ಲೀಟರ್ ವೆಜಿಟಬಲ್ ಆಯಿಲ್ ಸುಮಾರು ೧೫೦-೦೦ ರೂಪಾಯಿಗಳನ್ನು ಕಬಳಿಸುತ್ತಿದ್ದ ಸಹಾಯಕ ವಿದ್ಯಾಧಿಕಾರಿಗಳ ಬಗ್ಗೆ ಜಿಲ್ಲಾಧಿಕಾರಿಗಳು ಹಠಾತ್ ತನಿಖೆ ನಡೆಸಿದ ಪ್ರಕರಣದ ಬಗ್ಗೆ ಸರ್ಕಾರದ ಮೇಲೆ ಪ್ರಭಾವಿ ಶಕ್ತಿಗಳು ಒತ್ತಡ ಹೇರಿ ಮುಚ್ಚಿಹಾಕುತ್ತಿದ್ದಾರೆಂಬುದು ನಿಜವೇ ?

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಚಿತ್ರದುರ್ಗ ಜಿಲ್ಲಾಧಿಕಾರಿಗಳು ೨೬-೭-೮೬ ರಂದು ಚಿತ್ರದುರ್ಗ ಕೇಂದ್ರ ಪಾಕಶಾಲೆಗೆ ಭೇಟಿ ನೀಡಿ ಕೆಲವು ಅವ್ಯವಹಾರಗಳ ಬಗ್ಗೆ ೩೧-೭-೮೬ ರಂದು ವರದಿ ನೀಡಿದ್ದಾರೆ. ಈ ಕೇಂದ್ರ ಪಾಕಶಾಲೆಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಈಗಾಗಲೇ ವಶಪಡಿಸಿಕೊಂಡು ಉಪ ನಿರ್ದೇಶಕರ ಕಛೇರಿಯಲ್ಲಿ ಮೊಹರು ಮಾಡಿ ಇಡಲಾಗಿದೆ. ಆದುದರಿಂದ ಯಾವ ರೀತಿಯಿಂದಲೂ ಪ್ರಕರಣವನ್ನು ಮುಚ್ಚಿಹಾಕುವ ಪ್ರಸಂಗ ಉದ್ಭವಿಸುವುದಿಲ್ಲ. ಈ ಬಗ್ಗೆ ಪೂರ್ವಭಾವಿ ವಿಚಾರಣೆ ನಡೆಸಲು ಬೆಂಗಳೂರು ವಿಭಾಗೀಯ ಸಹ ನಿರ್ದೇಶಕರಿಗೆ ಈಗಾಗಲೇ ತಿಳಿಸಲಾಗಿದೆ.